

ಕುವೆಂಪು ಅವರು ಭಾವುಕರಾಗಿ 'ಬೆಳ್ಳಿಹಬ್ಬದ ಕಬ್ಬದ ಬಳ್ಳಿ' ಎಂಬ ಕವಿತೆ ಬರೆದರು. ಆ ಪದ್ಯದಲ್ಲಿ:

ರಾಜಋಷಿಯು ಕರ್ಮಋಷಿಯು
ಜ್ಞಾನಭಕ್ತಿ ಋಷಿಗಳಲ್ಲಿ ನಿನ್ನೊಳಿರುವರು
ಪ್ರಜೆಗಳಾದ ನಾವು ನಿನ್ನ
ಹೊಂದಿ ಧನ್ಯರಾದೆವು
ನಿನ್ನ ಸೇವೆಗೈದು ನಾವು
ಧನ್ಯರಾದೆವು.

ಎಂದು ಬರೆದು ನಾಲ್ವಡಿಯವರ ವ್ಯಕ್ತಿತ್ವವನ್ನು ಕೊಂಡಾಡಿದರು.

ನಿಜ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ರಾಜ್ಯವನ್ನು ಆಳಿದ್ದು ಬರೋಬ್ಬರಿ 38 ವರ್ಷ. ರಾಜರ ಆಡಳಿತದ ದೃಷ್ಟಿಯಿಂದ ಇದೇನೂ ಕಡಿಮೆ ಅವಧಿಯಲ್ಲ. ಈ ದೀರ್ಘ ಅವಧಿಯಲ್ಲಿ ಅವರು ನವಮೈಸೂರು ರಾಜ್ಯ ಕಟ್ಟಲು ಹಾಕಿಕೊಂಡ ಯೋಜನೆಗಳು, ಅನುಷ್ಠಾನ ಮಾಡಿದ ಕಾರ್ಯಗಳು, ಪ್ರಜೆಗಳನ್ನು ಕಂಡುಕೊಂಡ ಬಗೆ, ತೋರಿದ ರಾಜಕೀಯ ಮುತ್ಸದ್ದಿತನ – ಈ ಒಂದೊಂದೂ ಅವರ ಎತ್ತರ–ಬಿತ್ತರಗಳನ್ನು ಜಗತ್ತಿಗೆ ತೋರಿಸಿವೆ. ರಾಜಾಡಳಿತ ರಾಜ್ಯಗಳಲ್ಲಿ ಮುಂಚೂಣಿಯಲ್ಲಿದ್ದುದು ಮೈಸೂರು ರಾಜ್ಯವೇ. ಪ್ರಜೆಗಳೇ ಇದನ್ನು ಒಪ್ಪಿದ್ದರೆಂದರೆ ಮತ್ತೇನು ಪುರಾವೆ ಬೇಕು? ಚರಿತ್ರೆಕಾರರು ಅವರ ಸಾಧನೆಗಳನ್ನು ಚಪ್ಪರಿಸಿ ದಾಖಲಿಸಿದ್ದಾರೆ.

ಕಳೆದ ವರ್ಷ (2024) ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೂರ ನಲವತ್ತನೇ ಜಯಂತಿ. ನಾಡಿನಾದ್ಯಂತ ಅವರ ಕೊಡುಗೆಗಳನ್ನು ಕುರಿತು ವಿವಿಧ ಸಂಘ ಸಂಸ್ಥೆಗಳಿಂದ ರಾಜ್ಯ ಮಟ್ಟದ ಉಪನ್ಯಾಸಗಳಾದವು. ಅವರನ್ನು ಕುರಿತ ಗ್ರಂಥಗಳು ಪುನರ್‌ಮುದ್ರಣಗಳಾದವು. ಮತ್ತೆ ಅಂದಿನ ಸುಖೀ ಮೈಸೂರು ರಾಜ್ಯವನ್ನು ಕಣ್ಣಮುಂದೆ ತರಲಾಯಿತು. ಅವರ ಅಭಿವೃದ್ಧಿ ಕಾರ್ಯಗಳನ್ನು ಪುನರ್‌ಮನನ ಮಾಡಿದವರಿಗೆ ಎದ್ದು ಕಾಣುವುದು, ಆ ಕಾಲದಲ್ಲಿ ಅವರು ಆರಿಸಿಕೊಂಡ ದಿವಾನರು ಕೂಡ ಅವರಿಗೆ ಹೆಗಲು ಕೊಟ್ಟದ್ದು; ಮೈಸೂರು ರಾಜ್ಯದ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಿದ್ದು. ಪಿ.ಎನ್. ಕೃಷ್ಣಮೂರ್ತಿಯವರಿಂದ ತೊಡಗಿ, ಮಿರ್ಜಾ ಇಸ್ಮಾಯಿಲ್ ಅವರವರೆಗೆ ಏಳು ಮಂದಿ ದಿವಾನರ ಬೌದ್ಧಿಕ ಸಾಮರ್ಥ್ಯವನ್ನು ನಾಲ್ವಡಿಯವರು ಸಮರ್ಥವಾಗಿ ಬಳಸಿಕೊಂಡರು. ಅವರನ್ನು ಆಯ್ಕೆ ಮಾಡಿಕೊಳ್ಳುವುದರಲ್ಲೇ ಚಾಣಾಕ್ಷತನವಿತ್ತು; ಮುಂದಾಲೋಚನೆ ಇತ್ತು, ಪ್ರತಿಯೊಬ್ಬ ದಿವಾನರ ಬಗ್ಗೆಯೂ ವೈಯಕ್ತಿಕವಾಗಿ ಅವರಿಗೆ ತಿಳಿದಿತ್ತು. ಇವೆಲ್ಲದರ ಮೊತ್ತ ಎದ್ದು ಕಾಣುವಂತಹದ್ದು – ಮೈಸೂರು ಬ್ಯಾಂಕ್, ಗಂಧದ ಎಣ್ಣೆ ಕಾರ್ಖಾನೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ರೇಷ್ಮೆ ಕೇಂದ್ರ ಸ್ಥಾಪನೆ, ಮೈಸೂರು, ಬೆಂಗಳೂರು ನಗರಗಳಿಗೆ ವಿದ್ಯುತ್ ಪೂರೈಕೆ, ಕನ್ನಂಬಾಡಿ ಜಲಾಶಯ ನಿರ್ಮಾಣ, ರೈಲು ಮಾರ್ಗ ನಿರ್ಮಾಣ, ಕೃಷಿ ಶಾಲೆ ಸ್ಥಾಪನೆ, ಕಡ್ಡಾಯ ಶಿಕ್ಷಣ ಜಾರಿ, ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ, ಮಲೆನಾಡು ಅಭಿವೃದ್ಧಿ ಕೇಂದ್ರ ಸ್ಥಾಪನೆ, ವಯಸ್ಕರ ಶಿಕ್ಷಣ ಜಾರಿ, ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯ ಸ್ಥಾಪನೆ – ಇವು ಒಂದೊಂದೂ ಮೈಸೂರು ರಾಜ್ಯದ ಲಾಂಛನವಾಗಬಲ್ಲವು; ಗಂಡಭೇರುಂಡ ಲಾಂಛನದ ಪಕ್ಕ ಕೂಡಬಲ್ಲ ಸ್ಥಾನ ಗಳಿಸಬಲ್ಲಂತಹವು.

ಯೋಜಿತ ಆರ್ಥಿಕತೆಯ ಮೂಲಕ ಲಾಭ ತರುವ ಉದ್ಯಮಗಳನ್ನು ನಾಲ್ವಡಿಯವರು ಸ್ಥಾಪಿಸಿದ್ದನ್ನು ಕಂಡು ಆಳುವ ಬ್ರಿಟಿಷರೇ ಬೆರಗಾದರು. ಏಕೆಂದರೆ ಒಡೆಯರ್ ಅವರ ಈ ಮುಂಗಾಣಿಕೆಯಲ್ಲಿ ಆರ್ಥಿಕ ಚಿಂತನೆ ಇತ್ತು, ಶಿಕ್ಷಣ ನೀತಿಯ ಬಗ್ಗೆ ಸ್ಪಷ್ಟ ನಿಲುವಿತ್ತು, ಕೈಗಾರಿಕೋದ್ಯಮಗಳ ಬಗ್ಗೆ ಖಚಿತ ತಿಳಿವಿತ್ತು, ಇನ್ನು ಸಾಮಾಜಿಕ ಕಳಕಳಿಯಂತೂ ಎದ್ದು ಕಾಣುವಂತಿತ್ತು. ನೀರಾವರಿಗೆ ಹಿಂದೆಂದೂ ಇಲ್ಲದಂತಹ ಪ್ರೋತ್ಸಾಹವಿತ್ತು. ಜನಮನದಲ್ಲಿ ಅವರ ಆಡಳಿತ ಶಾಶ್ವತವಾಗಿ ಕೂತದ್ದು ಹೀಗೆ; ರಾಜ ಪ್ರತ್ಯಕ್ಷ ದೇವತೆ ಎಂಬ ನಡಿಗಟ್ಟಿನಲ್ಲಿ ವಿಶ್ವಾಸ ಬಂದಿದ್ದು ಇವರ ಆಡಳಿತದಲ್ಲೇ.

## ಕನ್ನಂಬಾಡಿ: ಮತ್ತೆ ಮತ್ತೆ ಚರ್ಚೆ ಏಕೆ?

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹಲವು ಅಭಿವೃದ್ಧಿ ಕಾರ್ಯಗಳಲ್ಲಿ ಎದ್ದು ಕಾಣುವ ಅಂಶಗಳಲ್ಲಿ ಕನ್ನಂಬಾಡಿ ಕಟ್ಟೆಯೂ ಒಂದು. ಒಂದನೇ ಮಹಾಯುದ್ಧದ ಆರಂಭದಲ್ಲೇ ಇದರ ಕಾಮಗಾರಿ ಮುಂದುವರಿಯಬೇಕಾಯಿತು. ಕನ್ನಂಬಾಡಿ ಕಟ್ಟೆ ಎಂದರೆ ಇಂದಿನ ತಲೆಮಾರಿಗೆ ತಬ್ಬಿಬ್ಬಾಗಬಹುದು. ಕೆ.ಆರ್.ಎಸ್. ಎಂದರೆ

### ಎಂಬತ್ತು ಲಕ್ಷ ರೂಪಾಯಿ ಸಾಲ ತೀರಿಸಲು ಕ್ರಮ

ಸಂಸ್ಥಾನವು ಎಂಬತ್ತು ಲಕ್ಷ ರೂಪಾಯಿಗಳ ಸಾಲವನ್ನು ಬ್ರಿಟಿಷ್ ಸರ್ಕಾರದಿಂದ 1877–78ರ ಬರ ಪರಿಹಾರಕ್ಕಾಗಿ ಮಾಡಿತ್ತು. ರಾಜ್ಯವು ಕ್ಷಾಮದ ಪರಿಣಾಮದಿಂದ ಕಡುಬಡತನದಲ್ಲಿ ತತ್ತರಿಸುತ್ತಿರುವಾಗ ಹೊಸ ತೆರಿಗೆಯನ್ನು ಹಾಕಲು ಸಾಧ್ಯವಿರಲಿಲ್ಲ. ರಾಜ್ಯದ ವರಮಾನ ಇಳಿಕೆಯಾಗಿತ್ತು. 1874–75ರಲ್ಲಿ 109 ಲಕ್ಷವಿದ್ದ ರಾಜ್ಯದ ಆದಾಯ 1880–81ರಲ್ಲಿ 101 ಲಕ್ಷಕ್ಕೆ ಇಳಿದಿತ್ತು. ಎಂಬತ್ತು ಲಕ್ಷ ರೂಪಾಯಿಗಳ ಸಾಲದ ಅಸಲಿಗೆ ರಾಜ್ಯವು ಭಾರತ ಸರ್ಕಾರಕ್ಕೆ ಪ್ರತಿವರ್ಷ ಶೇ. 5ರ ದರದಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ಸಂದಾಯ ಮಾಡುತ್ತಿತ್ತು. ಈ ಸಾಲದ ಭಾರವನ್ನು ತಗ್ಗಿಸಲು ದಿವಾನ ರಂಗಾಚಾರ್ಲು, ಬಡ್ಡಿ ದರವನ್ನು ಶೇ. 5ರಿಂದ ಶೇ. 4 ರೂಪಾಯಿಗೆ ಇಳಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಿದರು. ಹಾಗೂ ಅದರಲ್ಲಿ ಅವರು ಸಫಲರಾದರು. ಹಾಗೂ ಸಾಲವನ್ನು 41 ವಾರ್ಷಿಕ ಕಂತುಗಳಲ್ಲಿ ವಾಪಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಭಾರತ ಸರ್ಕಾರವನ್ನು ಒಪ್ಪಿಸುವಲ್ಲಿಯೂ ಯಶಸ್ವಿಯಾದರು. ಹೀಗೆ ದಿವಾನರು ಸಾಲದ ಭಾರವನ್ನು ಹಗುರಗೊಳಿಸಿದರು.

(ಸಮಗ್ರ ಆಧುನಿಕ ಮೈಸೂರು ಚರಿತ್ರೆ, ಲೇ: ಎಂ. ಕೃಷ್ಣಯ್ಯ, 2021, ಪು: 169).